ಕುಳಿತು ಉಕ್ಕೇರುವ ಕಡಲಿನಿಂದ ಎದ್ದು ಬಂದು ಕರೆದೊಯ್ಯುವ ದೊಡ್ಡ ತೆರೆಗೆ ಕಾದಿದ್ದೂ ಇದೆ! ಆದರೆ ಅಂದು ನನ್ನ ಸಾವಿಗೆ ಬೆನ್ನು ಹಾಕಿಸಿದ್ದು, ಬದುಕಿನೆಡೆಗೆ ಮತ್ತೆ ನನ್ನ ಜೋತುಬೀಳಿಸಿದ್ದು ನನ್ನೊಳಗೆಲ್ಲೋ ಅಡಗಿದ್ದ ಇದೇ ಜೋತಯ್ಯನೇ ಇದ್ದಿರಬಹುದೇ? ಎಂಬ ಪ್ರಶ್ನೆ ಇಂದು ಬಲವಾಗಿ ನನ್ನ ಕಾಡುತ್ತಿದೆ. ಈಗಲೂ ನಾನು ಶಾಪವಾಗಿರುವ ಈ ಮರೆವನ್ನು ಸೋಲಿಸಲು ಇನ್ನಿಲ್ಲದಂತೆ ಶ್ರಮಿಸುತ್ತಿದ್ದೇನೆ. ಹೀಗಾಗಿ ನೆನಪು ಪೂರ್ತಿ ಸಾಯುವ ಮುನ್ನ ನನ್ನೊಳಗಿನ ಜೋತಯ್ಯನ ಪರಿಚಯಿಸುವ ಉದ್ದೇಶದಿಂದ ಈ ಕಥೆ ಹೇಳುತ್ತಿದ್ದೇನೆ. ನೆನಪಿನ ಕೊಂಡಿಗಳು ಅಲ್ಲಲ್ಲಿ ಕಳಚಿಕೊಂಡು ಕಣಕಣಗುಡಿಸತೊಡಗಿವೆ.

★★★

''ಧಣಿ, ನಂಗೆ ಎರ್ಡುರ್ ದಿವ್ಸ ರಜೆ ಬೇಕ್ರ... ನಾಳೆ, ನಾಡಿದ್ದು ನಾ ಬರದಿಲ್ವ್ರ... ತೋಟಕ್ಕೆ ಹೆಂಗೂ ಗೊಬ್ರ ಸುಮಾರಿಗೆ ಹಾಕಾಗದೆ, ಉಳ್ದಿದ್ದೆಲ್ಲಾ ಶನಿವಾರ ಬಂದು ಮಾಡ್ಕೊಡ್ತೆ'' ನಾನು ಮತ್ತು ಅಪ್ಪಯ್ಯ ಅಡಿಕೆ ಆರಿಸುತ್ತಾ ಅಂಗಳದಲ್ಲಿದ್ದಾಗ ಆತ ಮೆಲ್ಲನೆ ಪ್ರಸ್ತಾಪಿಸಿದ್ದ. ಅವನ ಮಾತಿಗೆ ಹುಬ್ಬೇರಿಸಿದ್ದ ಅಪ್ಪಯ್ಯ, ''ಅಲ್ವೋ ಜೋಗಪ್ಪ, ಕಳೆದ ತಿಂಗ್ಳಷ್ಟೇ ಹೀಗೇ ರಜೆ ಕೇಳಿ ಮೂರು ದಿವ್ಸ ಮಾಯವಾಗ್ಬಿಟ್ಟಿದ್ದೆ! ಈಗ ನೋಡಿದ್ರೆ ಮತ್ತೆ ಕೇಳ್ತಿದ್ಯಲ್ಲೋ... ಹೀಂಗಾದ್ರೆ ತೋಟದ್ ಕೆಲ್ಸದ ಗತಿ ಹೇಂಗೆ? ಕೊನೆಕೊಯ್ಲು ಬೇರೆ ಹತ್ರ ಬಂದದೆ'' ತುಸು ಧ್ವನಿ ಏರಿಸಲು ಜೋಗಪ್ಪ ಸ್ವಲ್ಪವೂ ಬೇಸರಿಸದೆ ಬರಿದೆ ತಲೆಕೆರೆದುಕೊಂಡು ನಸುನಕ್ಕಿದ್ದ. ''ಅಯ್ಯಾ ಅದ್ಯಾಕಿಷ್ಟು ತಲೆಬಿಸಿ ಮಾಡ್ಕಂಡೀರಿ ಒಡೆಯಾ? ನಾ ಎಂತ ನನ್ನ್ ಕೆಲ್ಸ ಮಾಡೂಕೆ ಕಳ್ ಬಿದ್ದಿಲ್ವಲ್ರಾ... ಎಲ್ಲಾ ಕೆಲಸ ಸರೀ ಟೇಮಿಗೇ ಮುಗ್ಸಿಕೊಡ್ತಿದ್ನಲ್ರಾ... ಈ ತಿಂಗ್ಳು ಅಂತಲ್ವ್ರ, ಪ್ರತಿ ತಿಂಗ್ಳೂ ಒಂದೆರ್ಡ್ಮೂರು ದಿವ್ಸ ರಜೆ ಬೇಕಾಗ್ತದೆ ನಂಗೆ. ಅನಂತಪ್ಪ ನೀವಾದ್ರೂ ಹೇಳಿ ನಿಮ್ಮಪ್ಪಯ್ಯಂಗೆ'' ಎಂದು ನನ್ನತ್ತ ನೋಡಿದ್ದ. "ನೋಡೋ ಅನಂತು ಈ ಹುಡ್ಗನ್ನ... ಹೀಂಗೆ ಮೊದ್ಲು ಯಾವತ್ತೂ ಮಾಡಿದವನೇ ಅಲ್ಲಾ! ಹೊಸತಾಗಿ ಮದುವೆಯಾದಾಗಲೂ ಎರಡು ತಿಂಗಳಿಗೊಮ್ಮೆ ರಜೆ ಹಾಕಿದ್ದರೆ ಹೆಚ್ಚು! ಮಗ ಹುಟ್ದಾಗ ಪಾಪ ಮಾದೇವಿ ಬಾಣಂತನಕ್ಕೂ ಸರಿ ಜನ ಇಲ್ಲ ಅಂತ ಹೇಳಿ ನಾನೇ ಒಂದು ಹದಿನೈದು ದಿವ್ಸ ರಜೆ ಕೊಟ್ಟಿದ್ದೆ. ಅಷ್ಟೇ ಅಲ್ಲಾ, ಈಗೊಂದು ನಾಲ್ಕು ತಿಂಗಳಿಂದ ಐದು ವರುಷದ ಮಗನಿಗೆ ಕಾಲು ಸಣಕಲಾಗಿದೆ ಹೇಳಿ ಪಟ್ಣದ ಡಾಕ್ಟ್ರಿಗೆ ತೋರಿಸ್ಕಂಡ್ಬರ್ತೀನಿ ಅಂದ್ನಾ... ಆಗೆಲ್ಲಾ ದುಸ್ರಾ ಮಾತಾಡ್ದೆ ರಜೆ ಕೊಟ್ಟಿದ್ದೇನೆ. ಪಾಪ ಮಗೂಗೆ ಅದೇನೋ ವಿಚಿತ್ರ ರೋಗ ಬಂದು ಕಾಲಿಗೆ ನಿಶ್ಶಕ್ತಿಯಾಗಿದೆಯಂತೆ ಹೀಗಾಗಿ ಓಡಾಡೋದು ಕಷ್ಟ ಅಂದಿದ್ದಾರಂತೆ ಡಾಕ್ಟ್ರು. ಇಂವ ಏನಾದ್ರೂ ಅದನ್ನೇ ಮನಸಿಗೆ ಹಚ್ಚಿಕೊಂಡು ಅಡ್ಡದಾರಿಗೇನಾದ್ರೂ ಹೊಂಟವ್ನೋ ಏನೋ! ಸಮಾ ವಿಚಾರಿಸ್ಕೊಳ್ಬೇಕು ಇನ್ನು" ಎಂದು ಮಗನ ಬಳಿ ದೂರುತ್ತಾ, ತಮ್ಮ ಹುಬ್ಬುಗಂಟಾಗಿಸಿಕೊಂಡ ಶಂಕ್ರಪ್ಪ, ''ಲೋ ಜೋಗಪ್ಪಾ... ನಿಜ ಹೇಳು ಎಂತಕ್ಕೆ ನಿಂಗೆ ರಜೆ ಬೇಕೋ? ಮಗುಗೆ ಹುಶಾರಿಲ್ಲ ಹೇಳಿ ನೆಪ ಮಾಡ್ಕೊಂಡು ಏನಾದ್ರೂ ಬೇಡ್ದೇಹೋದ ಕೆಲ್ಸಕ್ಕೆ ಹೋಗ್ತಿದ್ದೀಯೇನೋ? ಊರಲ್ಲಿ ಮಟ್ಕ, ಹೆಂಡ, ಜೂಜು ಎಲ್ಲಾದೂ ಜೋರಾಗದೆ ಅಂತ ಸುದ್ದಿ ಬಂದದೆ ನಂಗೂ... ನೀನೇನಾದ್ರೂ...'' ಎಂದು ಗದರಿಸುವಾಗ ಪಕಪಕನೆ ನಕ್ಕುಬಿಟ್ಟಿದ್ದ ಜೋಗಪ್ಪ. ''ಅಯ್ಯಯ್ಯೋ ಹಾಂಗೇನೂ ಇಲ್ರೀ ಧಣಿ... ನಿಮ್ಗೆ ನಾ ಯೇನು ಹೊಸಬ್ನೇನ್ರಾ? ಮಗಿನ ಒಂದ್ಕಡೆ ಕರ್ಕಂಡು ಹೋಗ್ಬೇಕು ಅಷ್ಟೇಯಾ... ನೀವ್ ತಲೆಬಿಸಿ ಮಾಡ್ಕಂಬುದು ಬೇಡ... ನಾ ಎಲ್ಲಾ ಕೆಲ್ಸ ಮುಗ್ಸಿಕೊಟ್ರಾತೋ ಇಲ್ಲೋ!'' ಎಂದು ಗಟ್ಟಿಯಾಗಿ ಹೇಳುವಾಗ ಅಲ್ಲೇ ಕುಳಿತು ಅಡಿಕೆ ಆರಿಸುತ್ತಿದ್ದ ನನಗೆ ತಡೆಯಲಾಗದೇ, ''ಅಪ್ಪಯ್ಯ ಹೋಗ್ಲಿ ಬಿಡು ಮಾರಾಯಾ... ಅದೆಂತ ಕರ್ಕರೆ ಮಾಡ್ತಿದ್ದೀಯಾ ಎರಡು ದಿವ್ಸಕ್ಕಾಗಿ? ಎಂತದೋ ತುರ್ತು ಕೆಲ್ಸ ಇದ್ದಿರ್ಬಹುದು... ಯಾವ್ದೋ ಆಯುರ್ವೇದಿಕ್ ಡಾಕ್ಟ್ರ ಹತ್ರ ಮಗೂನ್ನ ಕರ್ಕೊಂಡು ಹೋಗ್ತಿದ್ದಿರ್ಬಹುದು ಅಲ್ವೇನೋ